# ಅಪರೂಪದ ಕಲಶ ಮಂದಿರ

ಪುಣೆ–ಮುಂಬೈ ರಾಷ್ಟ್ರೀಯ ಹೆದ್ದಾರಿಯಲ್ಲಿ ಪುನಾವಳಿಯಿಂದ ಸುಮಾರು 10 ಕಿ.ಮೀ. ಸಾಗಿದರೆ ಬಲಭಾಗದಲ್ಲಿ ಆಕರ್ಷಕವಾದ ಕಲಶಾಕಾರದ ಮಂದಿರವೊಂದು ಕಾಣುತ್ತದೆ. ಮಂದಿರ ಸಮೀಪ ಹೋದರೆ ಅದೊಂದು ಜೈನ ಮಂದಿರ ಎಂದು ತಿಳಿಯುತ್ತದೆ. ಅಮೃತಶಿಲೆ ಕಲ್ಲಿನಲ್ಲಿ ಈ ಕಲಶ ಮಂದಿರ ಕಟ್ಟಲಾಗಿದೆ. ಮಂದಿರ ಸುಮಾರು 50 ಅಡಿ ಎತ್ತರವಿರಬಹುದು.

ಕಲಶದ ಮಧ್ಯೆ ಎಡ ಭಾಗದಲ್ಲಿ ಕೆಲವು ಪ್ರಾಣಿಗಳ ಚಿತ್ರವಿದ್ದರೆ ಬಲ ಭಾಗದಲ್ಲಿ ಕೆಲವು ಸಾಂಕೇತಿಕ ವಸ್ತುಗಳ ಚಿತ್ರಗಳನ್ನು ಕೆತ್ತಲಾಗಿದೆ. ಅಪರೂಪದ ಇಂಥ ಕಲಶ ಮಂದಿರವನ್ನು ಇತ್ತೀಚೆಗೆ ಪುಣೆಗೆ ಹೋದಾಗ ನೋಡುವ ಅವಕಾಶ ಒದಗಿಬಂತು.

–ಗಣಪತಿ ಶಿರಳಗಿ, ಸಾಗರ





# ಅಡುಗೆ ಮನೆ ಆಪದ್ಬಾಂಧವ

ಬೇಸಿಗೆಯಲ್ಲಿ ಮಾರ್ಚ್, ಏಪ್ರಿಲ್ ತಿಂಗಳಿನಲ್ಲಿ ಮರದ ಕಾಂಡ, ರೆಂಬೆಯ ಬಳಿ ಗೊಂಚಲೊಂದರಲ್ಲಿ ಕನಿಷ್ಠ 10–15 ಕಾಯಿ ಬಿಡುವ ಬಿಂಬುಳ್ಳಿಯನ್ನು ಅಡುಗೆಗೆ ಹುಳಿಯಾಗಿ ಬಳಕೆ ಮಾಡಬಹುದು. ಹುಣಸೆ ಹುಳಿಗಿಂತ ಇದು ಹುಳಿಯ ಪ್ರಮಾಣ ಹೆಚ್ಚು ಹೊಂದಿರುತ್ತದೆ. ಕ್ಯಾಲ್ಸಿಯಂ, ಕಬ್ಬಿಣ, ನಾರಿನ ಅಂಶ ಹೊಂದಿರುವ ಇದನ್ನು ಕೆಲವರು ಉಪ್ಪಿನಕಾಯಿಯಾಗಿಯೂ ಬಳಕೆ ಮಾಡುತ್ತಾರೆ. ಜ್ಯೂಸ್ ಕೂಡಾ ಬಳಕೆಯಲ್ಲಿದೆ.

ಬೆಳ್ತಂಗಡಿ ಸೇರಿದಂತೆ ಕರಾವಳಿ ಭಾಗದ ರೈತರು ತೋಟದಲ್ಲಿ ಇದನ್ನು ಬೆಳೆಸಿದ್ದಾರೆ. ಆದರೆ ಇದನ್ನು ಉಪಯೋಗ ಮಾಡುವವರು ಕಡಿಮೆ. ಅನಿವಾರ್ಯವಾದಾಗ ಕೆಲವು ಬೆಳೆಗಾರರು ಇದನ್ನು ಅಡುಗೆಯಲ್ಲಿ ಅಪರೂಪಕ್ಕೆ ಬಳಕೆ ಮಾಡುವುದು ಇದೆ.

ಹಿತ್ತಲ ಗಿಡ ಮದ್ದಲ್ಲ ಎನ್ನುವ ಗಾದೆ ಇದರ ಉಪಯೋಗ ಕಡಿಮೆ ಇರುವ ಕಾರಣ ಇದಕ್ಕೆ ಅನ್ವಯಿಸುತ್ತದೆ ಎನ್ನಬಹುದು. ಸಾಧಾರಣ ಎತ್ತರದ ಮರದಲ್ಲಿ ರೆಂಬೆ, ಕಾಂಡ ಭಾಗದಲ್ಲಿ ಬೆಳೆಯುವ ಬಿಂಬುಳ್ಳಿ ನೋಡುವುದೇ ಅಂದ.

–ಅರುಣ್ ಕಿಲ್ಲೂರು

# ಮರದಲ್ಲೇ ಮೇಳ

ಛೇ! ಸಣ್ಣ ಸಣ್ಣ ಕಾಯಿಗಳನ್ನು ಹೊತ್ತ ಕೊಂಬೆಯನ್ನು ಹೀಗೆ ಕಡಿದು ಹಾಕಿದ್ದಾರಲ್ಲಾ, ಇಂಥ ಕಟುಕ ಮನಸ್ಸು ಯಾಕೆ ಬಂತೊ ಎಂದು ಕೊರಗುತ್ತಾ ಆ ಹಲಸಿನ ಮರದ ಹತ್ತಿರ ಹೋದವನಿಗೆ ಅಚ್ಚರಿ ಕಾದಿತ್ತು! ಅದು ಯಾರೋ ಕತ್ತರಿಸಿ ಹಾಕಿದ್ದಲ್ಲ. ಮರವನ್ನು ಅನುಕರಿಸುತ್ತಾ ನೆಲದ ಮೇಲೆ ಹಲಸಿನ ಗುಜ್ಜುಗಳು ಮೈದಳೆದ ದೃಶ್ಯ.

ಆ ಹಲಸಿನ ಮರದ ಕವಲು ಬೇರಿನಲ್ಲೂ ಕಾಯಿಗಳು ಹುಟ್ಟಿ ತನ್ನದು ಅಪರೂಪದ ಕುಟುಂಬ ಎಂದು ಸಾರುತ್ತಿತ್ತು. ಕಳೆದ ವರ್ಷ ಮಲೆನಾಡಲ್ಲಿ ಅತಿವೃಷ್ಟಿ ಜೊತೆಗೆ ಚಳಿಗಾಲದಲ್ಲಿ ಚಳಿಯೂ ಇರಲಿಲ್ಲ. ಹಾಗಾಗಿ ಮಾವು, ಹಲಸಿನ ಫಸಲು ಕಮ್ಮಿ ಎಂಬ ಹೇಳಿಕೆಗೆ ಸಡ್ಡು ಹೊಡೆಯುವಂತೆ ಎಲ್ಲದಕ್ಕೂ ತಾನು ಸೈ ಎನ್ನುವಂತಿದೆ ನಿಸರ್ಗ. ಕೊರೊನಾ, ಸಾಮಾಜಿಕ ಅಂತರ ಎಲ್ಲಾ ನಿಮಗಷ್ಟೇ ನಮಗಲ್ಲ ಎನ್ನುವಂತೆ ಮೈ ಕೈ ಕಾಲ ಮೇಲೆಲ್ಲಾ ಮಕ್ಕಳನ್ನು ಕೂರಿಸಿಕೊಂಡ ಈ ವಿಶಿಷ್ಟ ಹಲಸಿನ ಮರ ನೋಡ ಸಿಕ್ಕಿದ್ದು ತೀರ್ಥಹಳ್ಳಿ ಸಮೀಪದ ಅಣ್ಣುವಳ್ಳಿ ವಿಜಯ್‌ರವರ ಮನೆಯಂಗಳದಲ್ಲಿ.

–ಮುರಳೀಧರ ಕಿರಣಕೆರೆ

